ಪಿ.ಡಬ್ಲ್ಯೂ-1

ದಿನಾಕಃ 22.06.2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್.ಕೆ.ಎಸ್ ವಕೀಲರಿಂದಃ**

ಆರೋಪಿ ಏನು ಕೆಲಸ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಹಲವು ವರ್ಷಗಳಿಂದ ಆರೋಪಿ ಜೀವ ವಿಮೆ ಸಂಸ್ಥೆಯಲ್ಲಿ ವ್ಯವಸ್ಥಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಆರೋಪಿಯ ಹೆಂಡತಿಯು ಸಹ ಕೆಲಸ ಮಾಡುತ್ತಾರೆಂದರೆ ಗೊತ್ತಿಲ್ಲ. ಆರೋಪಿಯ ಆದಾಯ ತಿಂಗಳಿಗೆ 50,000/- ಗಿಂತಲೂ ಹೆಚ್ಚು ಎಂದರೆ ಗೊತ್ತಿಲ್ಲ. ಆರೋಪಿಗೆ ಸ್ವಂತ ಮನೆ ಇದೆ ಹಾಗೂ ಮೈಸೂರಿನಲ್ಲಿಯೂ ಸಹ ಸ್ವಂತ ಮನೆ ಇದೆ ಎಂದರೆ ಗೊತ್ತಿಲ್ಲ. ಆರೋಪಿಯ ಹತ್ತಿರ ಕಾರು ಬೈಕು ಇದೆ ಎಂದರೆ ಸಾಕ್ಷಿ ಬೈಕು ಇರುವ ಬಗ್ಗೆ ಗೊತ್ತು ಇನ್ನೂಳಿದ ವಿಚಾರ ಗೊತ್ತಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಮುಖ್ಯ ವಿಚಾರ ಪ್ರಮಾಣ ಪತ್ರದಲ್ಲ ರಿಯಲ್ ಎಸ್ಟೇಟ್ ಏಜೆಂಟ್ ಎಂದು ತಿಳಿಸಿದ್ದು ಸದರಿ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ರಿಯಲ್ ಎಸ್ಟೇಟ್ ಏಜೆಂಟ್ ಹಾಗೂ ವ್ಯವಸಾಯ ಮಾಡುತ್ತಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಬಗ್ಗೆ ನಾನು ಕೆಲಸ ಮಾಡುತ್ತಿದ್ದರೆ ಅದರ ಸಂಬಂಧ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೆ. ಹಾಜರುಪಡಿಸದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಆರ್ಥಿಕವಾಗಿ ಸಬಲರಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆರೋಪಿ 2013 ರಿಂದ ಇಲ್ಲಿಯವರೆಗೂ ಅನಾರೋಗ್ಯದಿಂದ ಬಳಲುತ್ತಿದ್ದಾರೆಂದರೆ ಗೊತ್ತಿಲ್ಲ. 2020-21 ರಲ್ಲಿ ಆರೋಪಿ ಸ್ಥಿತಿ ಗಂಭೀರವಾಗಿತ್ತು ಎಂದರೆ ಗೊತ್ತಿಲ್ಲ. ಸದರಿ ವಿಚಾರವಾಗಿ 2021 ರಲ್ಲಿ ನಾನು ಆರೋಪಿಯನ್ನು ನೋಡಲು ಅವರ ಮನೆಗೆ ಹೋಗಿರುತ್ತೇನೆಂದರೆ ಸರಿಯಲ್ಲ. ಆಗ ಆರೋಪಿಗೆ ಸಂಬಂಧಿಸದ ಆಸ್ಪತ್ರೆಯ ಚೀಟಿಗಳು ಹಾಗೂ ಬ್ಯಾಂಕಿನ ದಾಖಲಾತಿಗಳನ್ನು ನನ್ನ ಬಳಿ ನೀಡಿರುತ್ತಾರೆಂದರೆ ಸರಿಯಲ್ಲ. ಸದರಿ ದಾಖಲೆಗಳಲ್ಲಿ ಆರೋಪಿಗೆ ಸಂಬಂಧಿಸಿದ YES ಬ್ಯಾಂಕಿನ ಚೆಕ್ ಇತ್ತು ಎಂದರೆ ಸುಳ್ಳು. ಆ ರೀತಿ ಚೆಕ್ ನ್ನು ಪಡೆದು ದುರುಪಯೋಗ ಪಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ವಕೀಲರ ಮೂಲಕ ನೋಟೀಸ್ ಜಾರಿಗೊಳಿಸಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಒಂದುವೇಳೆ ನೋಟೀಸ್

ಜಾರಿಗೊಳಿಸಿದ್ದರೇ ಅದಕ್ಕೆ ಪ್ರತ್ಯುತ್ತರ ಅಥವಾ ಕಾನೂನು ಕ್ರಮ ಕೈಗೊಳ್ಳುತ್ತಿದ್ದರು ಎಂದರೆ ಅವರು ನನಗೆ ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಿಪಿ-5 ನ್ನು ಈ ಪ್ರಕರಣವನ್ನು ದಾಖಲಿಸಲು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣ ಕೊಟ್ಟಿಲ್ಲ ಹಾಗೂ ಆರೋಪಿ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಮುಖ್ಯ ವಿಚಾರಣೆ ಪರ ಶ್ರೀ ಎಮ್.ಆರ್.ಎಲ್ ವಕೀಲರಿಂದಃ**

ಆರೋಪಿ ಎರಡು ತರಹದ ಸಹಿ ಮಾಡುತ್ತಾರೆ. ನಿಪಿ-1 ರಲ್ಲಿರುವ ಸಹಿ ಆರೋಪಿಯದ್ದು ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಆರೋಪಿ ದಿಃ28.10.2022 ರಲ್ಲಿ ಕಲಂ 142 ಎನ್.ಐ ಆಕ್ಟದಲ್ಲಿ ಸಲ್ಲಿಸಿದ ಅರ್ಜಿಯನ್ನು ತೋರಿಸಲಾಗಿ ಸದರಿ ಅರ್ಜಿಯಲ್ಲಿ ಆರೋಪಿಯ ಸಹಿ ಇರುತ್ತದೆ ಹಾಗೂ ದಿಃ15.07.2022 ರಂದು ಆರೋಪಿ ಸಲ್ಲಿಸಿರುವ ಕಲಂ 70(2) ಅರ್ಜಿಯಲ್ಲಿರುವ ಸಹಿ ಆರೋಪಿಯದ್ದು ಎಂದು ನುಡಿದಿರುತ್ತಾರೆ. ದಿಃ07.02.2024 ರಂದು ಆರೋಪಿ ಸಲ್ಲಿಸಿರುವ ವಕಾಲತ ನಾಮೆಯಲ್ಲಿರುವ ಸಹಿ ಆರೋಪಿಯದ್ದು ಎಂದು ನುಡಿದಿರುತ್ತಾರೆ. ದಿಃ09.05.2022 ರಂದು ಆರೋಪಿ ಸಲ್ಲಿಸಿರುವ ವಕಾಲತ ನಾಮೆಯಲ್ಲಿರುವ ಸಹಿ ಆರೋಪಿಯದ್ದು ಎಂದು ನುಡಿದಿರುತ್ತಾರೆ. ಸದರಿ ನಾಲ್ಕು ದಾಖಲೆಗಳನ್ನು ದಾಖಲೆಗಳಿಗೊಸ್ಕರ ನಿಪಿ-6 ರಿಂದ 9 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್.ಕೆ.ಎಸ್ ವಕೀಲರಿಂದಃ**

ಆರೋಪಿ ಎರಡು ತರಹದ ಸಹಿ ಮಾಡುತ್ತಾರೆಂದು ನನ್ನ ಮುಖ್ಯ ವಿಚಾರಣೆಯಲ್ಲಾಗಲಿ, ದೂರಿನಲ್ಲಾಗಲಿ ಮತ್ತು ನೋಟೀಸ್ ನಲ್ಲಾಗಲಿ ಹೇಳಿ ಬರೆಸಿರುವುದಿಲ್ಲ. ಆರೋಪಿ ಎರಡು ತರಹದ ಸಹಿ ಮಾಡುತ್ತಾರೆಂದು ನನ್ನ ಬಳಿ ಇರುವ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ಹಿಂದೆ ಆರೋಪಿ ಎರಡು ತರಹದ ಸಹಿ ಮಾಡುವುದನ್ನು ನಾನು ನೋಡಿರುತ್ತೇನೆ. ಆರೋಪಿ ಎರಡು ತರಹದ ಸಹಿ ಮಾಡಿರುವುದನ್ನು ನಾನು ಪ್ರಶ್ನಿಸಿರುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ.ಹೇ.ಕೇ.ಸ.ಇದೆ.**

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು